ವಿಜಯವಾಣಿ

Online Newspaper Clipping Service
**Dtd- Friday, 22nd, March- 2019**

**Page No.02**

## ಇಂದು ಕಾಲೇಜು ವಾರ್ಷಿಕೋತ್ಸವ | 6 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

# ನಾಳೆ ದೇವರಾಜು ಅರಸು ವಿವಿ ಘಟಿಕೋತ್ಸವ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆಯಲ್ಲಿ ಮಾ.23ರಂದು 9ನೇ ಘಟಿಕೋತ್ಸವ ಆಯೋಜಿಸಿದ್ದು, 6 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದು ಉಸ್ತುವಾರಿ ಕುಲಪತಿ ಡಾ.ಎ.ವಿ.ಎಂ.ಕುಟ್ಟಿ ತಿಳಿಸಿದರು.

ಟಮಕದ ವೈದ್ಯಕೀಯ ಕಾಲೇಜಿನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಜತ ಮಹೋತ್ಸವ ಸಭಾಂಗಣದಲ್ಲಿ ಬೆಳಗ್ಗೆ 11ಕ್ಕೆ ನಡೆಯುವ ಸಮಾರಂಭದಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕುಲಾಧಿಪತಿ ಡಾ. ಎಸ್.ಕುಮಾರ್ ಪದವಿ ಪ್ರದಾನ ಮಾಡುವರು ಎಂದರು. ಅತಿ ಹೆಚ್ಚು ಅಂಕ ಗಳಿಸಿದ ಎಂಬಿಬಿಎಸ್ ವಿದ್ಯಾರ್ಥಿನಿ, ತಮಿಳುನಾಡಿನ ಡಾ. ಅಭಿನಯಾ ರವಿಚಂದ್ರನ್, ಸ್ನಾತಕೋತ್ತರ ಪದವಿಯಲ್ಲಿ ಅರವಳಿಕೆ ವಿಭಾಗದಲ್ಲಿ ಡಾ. ಡಿ.ಜಿ. ನಿಖಿಲಾ (ಎಂಡಿ), ರೋಗ ಲಕ್ಷಣ ವಿಭಾಗದಲ್ಲಿ ಡಾ.ಪಾಂಡೆ ಸ್ವಾತಿ (ಎಂಡಿ), ಗರ್ಭಿಣಿ ಮತು ಸ್ತ್ರೀ ರೋಗ ಶಾಸ್ತ್ರ ವಿಭಾಗದಲ್ಲಿ ಡಾ.ಪೂನ್‌ಗುಜಾಲಿ ಲಿಸ್ಟನ್ (ಎಂಎಸ್) ಮತ್ತು ಡಿಪ್ಲೋಮಾ ಕೋರ್ಸ್‌ನಲ್ಲಿ ಅರವಳಿಕೆ ವಿಭಾಗದಲ್ಲಿ ಡಾ. ಡಿ.ಎಸ್.ಅಪೂರ್ವಾ, ಕಿವಿ, ಮೂಗು ಮತ್ತು ಗಂಟಲು ಶಾಸ್ತ್ರ ವಿಭಾಗದಲ್ಲಿ ಡಾ.ಆರ್. ಪ್ರದೀಪ್ ಕೃಷ್ಣ ಪದಕಕ್ಕೆ ಭಾಜನರಾಗಿದ್ದಾರೆ ಎಂದರು.

ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ. ಮುನಿನಾರಾಯಣ ಮಾತನಾಡಿ, ತಲಾ ಇಬ್ಬರಿಗೆ ಪಿಎಚ್‌ಡಿ, ಫೆಲೋಶಿಪ್, ಸ್ನಾತಕೋತ್ತರ ಪದವಿಯ 55, ಸ್ನಾತಕೋತ್ತರ ಡಿಪ್ಲೋಮಾ 19, ಎಂಬಿಬಿಎಸ್ ಪದವಿಯಲ್ಲಿ 109, ಸ್ನಾತಕೋತ್ತರ ಡಿಪ್ಲೋಮಾ ಯೋಗಾಭ್ಯಾಸದಲ್ಲಿ 3, ಎಂಎಸ್‌ಸಿ, ಎಂಎಲ್‌ಟಿ 2, ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸಸ್ 25 ವಿದ್ಯಾರ್ಥಿಗಳು ಸೇರಿ ಒಟ್ಟು 217 ವಿದ್ಯಾರ್ಥಿಗಳಿಗೆ ವಿವಿಧ ಕೋಸ್‌ಗಳಲ್ಲಿ ಪದವಿ ಪ್ರದಾನ ಮಾಡಲಾಗುವುದು ಎಂದರು. ಶ್ರೀ ದೇವರಾಜ ಅರಸು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಪಿ.ಎನ್.ಶ್ರೀರಾಮುಲು ಮಾತನಾಡಿ, ಕಾಲೇಜಿನ ವಾರ್ಷಿಕೋತ್ಸವವನ್ನು ಮಾ. 22ರಂದು 3ಕ್ಕೆ ಆಯೋಜಿಸಲಾಗಿದೆ ಎಂದರು. ಕುಲಸಚಿವ ಡಾ.ಕೆ.ಎನ್ .ವಿ.ಪ್ರಸಾದ್, ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ, ಉಪ ಪ್ರಾಂಶುಪಾಲ ಡಾ. ಶಶಿಧರ್, ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ. ಸಿ.ಕೆ. ರಂಜನ್ ಹಾಜರಿದ್ದರು.



ವಿಜಯವಾಣಿ ಚಿತ್ರ

ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಘಟಕೋತ್ಸವದ ಕುರಿತು ಉಸ್ತುವಾರಿ ಕುಲಪತಿ ಡಾ.ಎ.ವಿ.ಎಂ.ಕುಟ್ಟಿ ಮಾಹಿತಿ ನೀಡಿದರು.

ವಿಶ್ವವಾಣಿ



# ಅರಸ್ ಸಂಸ್ಥೆ: ಘಟಿಕೋತ್ಸವ ನಾಳೆ

**ವಿಶ್ವವಾಣಿ ಸುದ್ದಿಮನೆ** ಕೋಲಾರ

ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಒಂಭತ್ತನೇ ಘಟಿಕೋತ್ಸವ ಮಾ.23 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಪ್ರೊ ಚಾನ್ಸಲರ್ ಡಾ. ಸಿ. ಕೆ.ರಂಜನ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವಿಶ್ವವಿದ್ಯಾಲಯದ 217 ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದ್ದು ಇಬ್ಬರಿಗೆ ಪಿಎಚ್‌ಡಿ, ಇಬ್ಬರಿಗೆ ಫೆಲೋಶಿಪ್,55 ಮಂದಿಗೆ ಸ್ನಾತಕೋತ್ತರ ಪದವಿ, 19 ಮಂದಿಗೆ ಸ್ನಾತಕೋತ್ತರ ಡಿಪ್ಲಮೋ,109 ಮಂದಿಗೆ ಎಂಬಿಬಿಎಸ್ ಪದವಿ, 3 ಮಂದಿಗ್ಗೆ ಯೋಗದಲ್ಲಿ ಸ್ನಾತಕೋತ್ತರ ಡಿಪ್ಲಮೋ, ಇಬ್ಬರಿಗೆ ಎಂಎಸ್ಸಿ ಹಾಗೂ 25 ಮಂದಿಗೆ ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸಸ್ ಪದವಿ ನೀಡಲಾಗುತ್ತಿದೆ ಎಂದರು.

ಎಂಬಿಬಿಎಸ್‌ನಲ್ಲಿ ಡಾ.ಅಭಿನಯ ರವಿ ಚಂದ್ರನ್ ಚಿನ್ನದ ಪದಕ ಪಡೆದು ಕೊಂಡಿದ್ದು ಡಾ.ಪಾಂಡೆಸ್ವಾತಿ(ಎಂಡಿ,ರೋಗ ಲಕ್ಷಣ ಶಾಸ್ತ್ರ), ಡಾ.ನಿಖಿಲ(ಎಂಡಿ, ಅರವಳಿಕೆ ಶಾಸ್ತ್ರ), ಡಾ.ಪೂರ್ಣಗುಜಾಲಿ ಲಿಸ್ಸನ್(ಎಂ ಎಸ್,ಗರ್ಭಿಣಿ ಮತ್ತು ಸ್ತ್ರೀ ರೋಗ ಶಾಸ್ತ್ರ), ಡಾ.ಅಪೂರ್ವ(ಡಿಪ್ಲಮೋ, ಅರವಳಿಕೆ ಶಾಸ್ತ್ರ) ಮತ್ತು ಡಾ.ಪ್ರದೀಪ್‌ಕೃಷ್ಣ(ಡಿಪ್ಲಮೋ, ಕಿವಿ,ಮೂಗು ಮತ್ತು ಗಂಟಲು ಶಾಸ್ತ್ರ) ಅವರೂ ಸಹಾ ಚಿನ್ನದ ಪದಕ ಗಳಿಸಿದ್ದು ಮಾ.22 ರಂದು ಸಂಜೆ ಕಾಲೇಜಿನಲ್ಲಿ ನಡೆಯುವ ಸಮಾರಂಭದಲ್ಲಿ ಬಿಟ್ಟಾರೆ 19 ಪದಕಗಳನ್ನು ಪ್ರದಾನ ಮಾಡಲಾಗುವುದೆಂದು ಹೇಳಿದರು.

ಬೆಸ್ಟ್ ಔಟ್ ಗೋಯಿಂಗ್ ವಿದ್ಯಾರ್ಥಿನಿಯಾಗಿ ಡಾ.ಎಂ.ಸುಲ್ತಾನಾ ಆಸೀಂ ಆಯ್ಕೆ ಆಗಿದ್ದಾರೆ. ಅಂತೆಯೇ ಡಾ.ಟಾನ್, ಡಾ. ವಿಷ್ಣು, ಡಾ. ಧ್ರುವಕುಮಾರ್(ಕ್ರೀಡೆ), ಡಾ. ಶ್ರಾವ್ಯಮೋನಿಕಾ (ಕ್ರೀಡೆ), ಡಾ. ಪ್ರಖ್ಯಾತ್ ,ಡಾ.ಉತ್ತಮ್,ಡಾ.ಎನ್.ಸಿರೀಶಾ (ಸಾಂಸ್ಕೃತಿಕ) ಚಿನ್ನದ ಪದಕಗಳನ್ನು ಪಡೆದುಕೊಳ್ಳುತ್ತಿದ್ದಾರೆಂದು ಮಾಹಿತಿ ನೀಡಿದರು.

ದೇವರಾಜ ಅರಸ್ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲ್ ಡಾ.ಪಿ.ಎನ್.ಶ್ರೀರಾಮುಲು ಮಾತನಾಡಿ, 18 ಸ್ನಾತಕೋತ್ತರ ಪದವಿ ಸೀಟ್‌ಗಳನ್ನು ಮುಂದಿನ ವರ್ಷದಿಂದ ಹೆಚ್ಚಿಸಲು ವೈದ್ಯಕೀಯ ಮಂಡಳಿ ಅನುಮೋದನೆ ಸಿಕ್ಕಿದ್ದು ಹೀಗಾಗಿ ಒಟ್ಟಾರೆ 85 ಮಂದಿ ಪಿಜಿ ಸೀಟ್‌ಗಳನ್ನು ಪಡೆದುಕೊಳ್ಳಬಹುದಾಗಿದೆ.

ಅಂತೆಯೇ ಮನೋವಿಜ್ಞಾನ ಮತ್ತು ತುರ್ತು ಚಿಕಿತ್ಸೆಯಲ್ಲಿ ಹೊಸದಾಗಿ ಪಿಜಿ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದ್ದು ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಯಲ್ಲಿ ಯೂರಾಲಜಿ ಮತ್ತು ಅಂಕಾಲಜಿ ಸೇರ್ಪಡೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ರಿಜಿಸ್ಟ್ರಾರ್ ಡಾ.ಪ್ರಸಾದ್,ಕುಲಪತಿ ಡಾ. ಎಮ್ಎಂ ಕುಟ್ಟಿ,ಪರೀಕ್ಷಾ ನಿಯಂತ್ರಕ ಡಾ. ಮುನಿನಾರಾಯಣ, ಆಸ್ಪತ್ರೆ ಅಧೀಕ್ಷಕ ಡಾ. ಲಕ್ಷ್ಮಯ್ಯ ಇದ್ದರು.



**ಪಠ್ಯ ಪುಸ್ತಕದ ಅಧ್ಯಯನಕ್ಕಿಂತ ಹೆಚ್ಚಾಗಿ ಪ್ರಾಕ್ಟಿಕಲ್ ನಾಲೆಡ್ಜ್ ಪಡೆದುಕೊಳ್ಳುವ ಮೂಲಕ ಆಳವಾದ ಅಧ್ಯಯನ ಮಾಡಿದ್ದು ಚಿನ್ನದ ಪದಕ ಪಡೆದುಕೊಳ್ಳಲು ಸಾಧ್ಯವಾಯಿತು. ಹೃದಯರೋಗ ತಜ್ಞೆಯಾಗುವ ಮೂಲಕ ಜನತೆಗೆ ಸೇವೆ ಸಲ್ಲಿಸುವ ಆಶಯ ಹೊಂದಿದ್ದೇನೆ.**

**- ಡಾ.ಅಭಿನಯರವಿಚಂದ್ರನ್**, ಚಿನ್ನದ ಪದಕ ವಿಜೇತೆ

**ಕಠಿಣ ಪರಿಶ್ರಮ,ಸತತ ಅಧ್ಯಯನದ ಜತೆಗೆ ಪ್ರಾಕ್ಟಿಕಲ್ ತರಬೇತಿ, ತಂದೆ-ತಾಯಿ ಸಹಕಾರ, ಉಪನ್ಯಾಸಕರ ಮಾರ್ಗದರ್ಶನದಿಂದಾಗಿ ಚಿನ್ನದ ಪದಕ ಗಳಿಸಲು ಸಾಧ್ಯವಾಗಿದ್ದು ಗ್ರಾಮೀಣ ಸೇವೆಯಲ್ಲಿ ತೊಡಗುವ ಮೂಲಕ ವೃತ್ತಿ ಸಾರ್ಥಕತೆ ಪಡೆಯುತ್ತೇನೆ.**

**- ಡಾ.ಡಾ.ನಿಖಿಲ(ಎಂಡಿ, ಅರವಳಿಕೆ ಶಾಸ್ತ್ರ)**, ಚಿನ್ನದ ಪದಕ ವಿಜೇತೆ

ಉದಯವಾಣಿ



# 23ಕ್ಕೆ ದೇವರಾಜ ಅರಸು ಸಂಸ್ಥೆಯ 9 ನೇ ಘಟಿಕೋತ್ಸವ



ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾಸಂಸ್ಥೆಯ 9 ನೇ ಘಟಿಕೋತ್ಸವವು ಮಾ.23 ರಂದು ನಡೆಯುತ್ತಿದ್ದು, ಈ ಬಾರಿ ಚಿನ್ನದ ಪದಕ ಪಡೆದುಕೊಂಡ ವಿದ್ಯಾರ್ಥಿಗಳು.

**ಕೋಲಾರ.** ನಗರದ ಹೊರವಲಯದ ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 9 ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಿದ ಐವರು ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮೋ ವಿದ್ಯಾರ್ಥಿಗಳು ಚಿನ್ನದ ಪದಕ ಗೌರವಕ್ಕೆ ಪಾತ್ರರಾಗಿದ್ದಾರೆಂದು ಕುಲಾಧಿಪತಿ ಡಾ.ಎ.ವಿ.ಎಂ.ಕುಟ್ಟಿ ಹೇಳಿದರು.

ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಚಿನ್ನದಪದಕ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಪ್ರಕಟಿಸಿ, ಘಟಿಕೋತ್ಸವದಲ್ಲಿ 217 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.

**ಪದಕ:** 2018ನೇ ಸಾಲಿನಲ್ಲಿ ರೋಗಲಕ್ಷಣ ಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿ ಉತ್ತರ ಪ್ರದೇಶದ ಡಾ.ಪಾಂಡೆಸ್ವಾತಿ, ಅರವಳಿಕೆ ಶಾಸ್ತ್ರವಿಭಾಗದಲ್ಲಿ ಕೋಲಾರದ ಡಾ.ಡಿ.ಜಿ.ನಿಖಿಲ, ಗರ್ಭಿಣಿ ಮತ್ತು ಸ್ತ್ರೀ ರೋಗ ಶಾಸ್ತ್ರ ವಿಭಾಗದಲ್ಲಿ ತಮಿಳುನಾಡಿನ ಡಾ.ಪೂಂಗುಜಾಲಿ ಲಿಸ್ಟನ್, ಡಿಪ್ಲೊಮೋ ಅರವಳಿಕೆ ಶಾಸ್ತ್ರ ವಿಭಾಗದಲ್ಲಿ ಬೆಂಗಳೂರಿನ ಡಾ.ಡಿ.ಎಸ್. ಅಪೂರ್ವ ಮತ್ತು ಕಿವಿ ಮೂಗು ಮತ್ತು ಗಂಟಲು ಶಾಸ್ತ್ರ ವಿಭಾಗದಲ್ಲಿ ತಮಿಳುನಾಡಿನ ಡಾ.ಆರ್. ಪ್ರದೀಪ್ ಕೃಷ್ಣ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಎಂ.ಬಿ.ಬಿ.ಎಸ್ ವಿಭಾಗದಲ್ಲಿ ತಮಿಳುನಾಡಿನ ಡಾ.ಅಭಿನಯ ರವಿಚಂದ್ರನ್ ಚಿನ್ನದಪದಕದೊಂದಿಗೆ ಪದವಿ ಪಡೆದುಕೊಳ್ಳಲಿದ್ದಾರೆಂದು ವಿವರಿಸಿದರು.

ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಮುನಿ ನಾರಾಯಣ ಮಾತನಾಡಿ, ಪಿಎಚ್‌ಡಿ ಪದವಿ ಪಡೆದವರಲ್ಲಿ ಡಾ.ಸುಮಂತ್ ಮತ್ತು ಕೋಲಾರದ ಡಾ.ದೀಪಾ ಸೇರಿದ್ದಾರೆಂದರು. ಇಬ್ಬರಿಗೆ ಫೆಲೋಷಿಪ್, 55ಮಂದಿಗೆ ಸ್ನಾತಕೋತ್ತರ ಪದವಿ, 19 ಮಂದಿಗೆ ಸ್ನಾತಕೋತ್ತರವ ಡಿಪ್ಲೊಮೋ, 109 ಮಂದಿಗೆ ಎಂಬಿಬಿಎಸ್, ಮೂರು ಮಂದಿಗೆ ಸ್ನಾತಕೋತ್ತರ ಡಿಪ್ಲೊಮೋ ಯೋಗಾ ಪ್ರಾಕ್ಟಿಸ್, ಇಬ್ಬರಿಗೆ ಎಂಎಸ್ಸಿ ಎಂಎಲ್‌ಟಿ ಹಾಗೂ 25 ಮಂದಿಗೆ ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸ್‌ನಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಘಟಿಕೋತ್ಸವ:** ಮಾ.23 ರಂದು ಶನಿವಾರ ಘಟಿಕೋತ್ಸವ ನಡೆಯಲಿದ್ದು, ನಿಮ್ಹಾನ್ಸ್ ನಿರ್ದೇಶಕ ಡಾ.ಬಿ.ಎನ್.ಗಂಗಾಧರ್, ಘಟಿಕೋತ್ಸವದ ಭಾಷಣ ಮಾಡುವರು. ಕುಲಾಧಿಪತಿ ಡಾ.ಎಸ್.ಕುಮಾರ್ ಘಟಿಕೋತ್ಸವ ಅಧ್ಯಕ್ಷತೆ ವಹಿಸುವರು.

ಕಾಲೇಜಿನ ಪ್ರಾಂಶುಪಾಲ ಡಾ.ಶ್ರೀರಾಮುಲು ಮಾತನಾಡಿ, ಮಾ.22 ರಂದು ತಮ್ಮ ಕಾಲೇಜಿನ ವಾರ್ಷಿಕೋತ್ಸವವನ್ನು ಸಂಜೆ ಹಮ್ಮಿಕೊಳ್ಳಲಾಗಿದ್ದು, ಈ ಸಂದರ್ಭದಲ್ಲಿ 2013-14 ನೇ ಬ್ಯಾಚಿನ ಅತ್ಯುತ್ತಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಗುವುದು. ಈ ಸಾಲಿನ ಅತ್ಯುತ್ತಮ ವಿದ್ಯಾರ್ಥಿಯಾಗಿ ಡಾ.ಮಹನಾಜ್ ಸುಲ್ತಾನಾ ಅಜೀಂ ಹೊರಹೊಮ್ಮಿದ್ದಾರೆ. ಉಳಿದಂತೆ ಫಾರ್ಮಕಾಲಜಿ, ಆಪ್ತಮಾಲಜಿ, ಇಎನ್‌ಟಿ, ಜನರಲ್ ಸರ್ಜರಿ 4 ವಿಭಾಗಗಳಲ್ಲಿ ಡಾ.ಅಭಿನಯ ರವಿಚಂದ್ರನ್ 4 ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಮಲೇಷಿಯಾದ ಡಾ.ತಂಗಚುನ್‌ಕಿಟ್ ಬಯೋ ಕೆಮಿಸ್ಟ್ರಿ ಮೈಕ್ರೋಬಯಾಲಜಿ ಹಾಗೂ ಒಬಿಜಿ ಮೂರು ವಿಭಾಗದಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಡಾ.ಮಹನಾಜ್ ಸುಲ್ತಾನಾ ಅಜೀಂ ಪಿಡಿಯಾಟ್ರಿಕ್ಸ್, ಜನರಲ್ ಮೆಡಿಸಿನ್ ಎರಡು ವಿಭಾಗದಲ್ಲಿ ಚಿನ್ನ ಹಾಗೂ ಡಾ.ಲಾಲಿಯೋ ಸಿಯಾಂಗ್ ಅನಾಟಮಿ, ಪಿಸಿಯಾಲಜಿ ಎರಡು ವಿಭಾಗದಲ್ಲಿ, ಕಮ್ಯುನಿಟಿ ಮೆಡಿಸಿನ್‌ನಲ್ಲಿ ಡಾ.ಎಸ್. ವಿಷ್ಣುಪ್ರಿಯೆ, ಪೆಥಾಲಜಿಯಲ್ಲಿ ಡಾ.ಜೆಂಕ್ಸಿ ಚಾನ್ ಮತ್ತು ಫ್ಲೋರೆನ್ಸಿಕ್ ಮೆಡಿಸಿನ್‌ನಲ್ಲಿ ಡಾ.ಎಂ.ಎಲ್. ಮೃದುಲ ತಲಾ ಒಂದೊಂದು ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ ಎಂದರು.

ಕ್ರೀಡಾ ವಿದ್ಯಾರ್ಥಿ ಡಾ.ಧ್ರುವಕುಮಾರರೆಡ್ಡಿ, ಡಾ.ಶ್ರಾವ್ಯ ಮೋನಿಕಾ ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಏರ್‌ಮಾರ್ಷಲ್ ಡಾ.ಸಿ.ಕೆ.ರಾಜನ್, ಡಾ.ಲಕ್ಷ್ಮಯ್ಯ, ಡಾ.ಎವಿ.ಎನ್.ಪ್ರಸಾದ್ ಇತರರಿದ್ದರು.

# ನಾಳೆ ಘಟಿಕೋತ್ಸವ ಸಮಾರಂಭ

ಕೋಲಾರ: 'ಸಂಸ್ಥೆಯ 9ನೇ ಘಟಿಕೋತ್ಸವ ಸಮಾರಂಭ ಮಾರ್ಚ್ 23ರಂದು ನಡೆಯಲಿದೆ' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ.ಕುಟ್ಟಿ ತಿಳಿಸಿದರು.

ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ದೇವರಾಜ ಅರಸು ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಬೆಳಿಗ್ಗೆ 11ಕ್ಕೆ ಸಮಾರಂಭ ಆರಂಭವಾಗಲಿದೆ' ಎಂದು ಹೇಳಿದರು.

'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ಘಟಿಕೋತ್ಸವ ಭಾಷಣ ಮಾಡುತ್ತಾರೆ. ಸಮಾರಂಭದಲ್ಲಿ ಸಂಸ್ಥೆಯ 217 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು' ಎಂದರು.

'ಪಿ.ಎಚ್‌ಡಿ ಮತ್ತು ಫೆಲೋಶಿಪ್ ತಲಾ ಇಬ್ಬರು ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿ ಹಂತದ 55, ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ನ 19 ಮಂದಿ ಹಾಗೂ ಎಂಬಿಬಿಎಸ್ ಕೋರ್ಸ್‌ನ 109 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಾದ ಡಾ.ಪಾಂಡೆ ಸ್ವಾತಿ, ಡಾ.ಡಿ.ಜಿ.ನಿಖಿಲಾ, ಡಾ.ಪೂನ್ ಗುಜಾಲಿ ಲಿಸ್ಸನ್, ಡಾ.ಡಿ.ಎಸ್.ಅಪೂರ್ವ, ಡಾ.ಆರ್.ಪ್ರದೀಪ್ ಕ್ರಿಷ್ಣ, ಡಾ.ಅಭಿನಯ ರವಿಚಂದ್ರನ್ ಅವರಿಗೆ ಚಿನ್ನದ ಪದಕ ನೀಡಿ ಪುರಸ್ಕರಿಸಲಾಗುತ್ತದೆ' ಎಂದರು.

'ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ. ದೇವರಾಜ ಅರಸು ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ ಅತಿಥಿಯಾಗಿ ಭಾಗವಹಿಸುತ್ತಾರೆ. ಓದು ಬರಹ, ಸಾಮಾನ್ಯ ಜ್ಞಾನ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮಾರ್ಚ್ 22ರಂದು ನಡೆಯುವ ಕಾಲೇಜು ದಿನಾಚರಣೆಯಲ್ಲಿ ಗೌರವಿಸಲಾಗುವುದು' ಎಂದು ಪ್ರಾಂಶುಪಾಲ ಡಾ.ಶ್ರೀರಾಮುಲು ಮಾಹಿತಿ ನೀಡಿದರು.

ಸಂಸ್ಥೆಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿನಾರಾಯಣ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಡಾ.ಲಕ್ಷ್ಮಯ್ಯ, ಕೆ.ಎನ್.ಶಶಿಧರ್ ಇದ್ದರು.

# ೬ ಮಂದಿಗೆ ಬಂಗಾರದ ಪದಕ ಪ್ರದಾನ, ವೈದ್ಯಪದವಿಗೆ ೨೧೬ ಮಂದಿ ಭಾಜನ



ಡಾ॥ ಪಾಂಡೇ ಸ್ವಾತಿ



ಡಾ॥ ಡಿ.ಜಿ. ನಿಖಿಲಾ



ಡಾ॥ ಅಭಿನಯ ರವಿಚಂದ್ರನ್



ಡಾ॥ ಡಿ.ಎಸ್. ಅಪೂರ್ವ



ಡಾ॥ ಆರ್. ಪ್ರದೀಪ್‌ಕೃಷ್ಣ



ಡಾ॥ ಪೂಂಗುಳಾಲಿ ಲಿಸ್ಬನ್

ಕೋಲಾರ ಮಾ ೨೧ ನಗರದ ಹೊರವಲಯದ ಟಮಕದ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ೯ನೇ ಘಟಿಕೋತ್ಸವ ಇದೇ ೨೩ರ ಶನಿವಾರ ಬೆಳಿಗ್ಗೆ ೧೧ ಘಂಟೆಗೆ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆಯಲಿದ್ದು ಈ ಬಾರಿ ಆರು ಮಂದಿಗೆ ಸ್ವರ್ಣಪದಕ ಮತ್ತು ೨೧೬ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದೆಂದು ಸಂಸ್ಥೆಯ ನೂತನ ಕುಲಪತಿ ಡಾ॥ ಎ.ವಿ.ಎಂ. ಕುಟ್ಟಿ ತಿಳಿಸಿದರು.

ಪತ್ರಕರ್ತರಿಗೆ ಈ ಕುರಿತು ಮಾಹಿತಿ ನೀಡಿದ ಶ್ರೀಯುತರು ಡಾ॥ಪಾಂಡೆ ಸ್ವಾತಿ (ಪೆಥಾಲಜಿ), ಡಾ॥ ಡಿ.ಜಿ. ನಿಖಿಲಾ (ಅರವಳಿಕೆ ಶಾಸ್ತ್ರ), ಡಾ॥ ಪೂಂಗುಳಾಲಿ ಲಿಸ್ಬನ್ (ಪ್ರಸೂತಿಶಾಸ್ತ್ರ), ಡಾ॥ ಡಿ.ಎಸ್.ಅಪೂರ್ವ (ಅರವಳಿಕೆ ಶಾಸ್ತ್ರ ಡಿಪ್ಲೋಮಾ), ಡಾ॥ ಆರ್.ಪ್ರದೀಪ್‌ಕೃಷ್ಣ(ಡಿಎಲ್‌ಓ) ಡಾ॥ ಬಿ. ಪ್ರಖ್ಯಾತ್, ಡಾ॥ ರುಚಿರ್ ಉತ್ತಮ್, ಡಾ॥ ನಾಲಿ ಸಿರೀಷ ಅವರಿಗೆ ಅರಸ್ ವೈದ್ಯಕೀಯ ಕಾಲೇಜ್ ಅಕಾಡೆಮಿಕ್ ಸೊಸೈಟಿ ಚಿನ್ನದ ಪದಕಗಳನ್ನು ನೀಡುತ್ತಿದೆಯೆಂದು ತಿಳಿಸಿದರು.

ಮುಂದಿನ ಸಾಲಿಗೆ ಕಾಲೇಜಿಗೆ ೧೮ ಹೆಚ್ಚುವರಿ ಸೀಟುಗಳು ಲಭಿಸಲಿವೆ. ೧೮ ಡಿಪ್ಲೊಮಾ ಸೀಟುಗಳು ಇರುವುದಿಲ್ಲ. ಸ್ನಾತಕೋತ್ತರ ಪದವಿಯಲ್ಲಿ ಮನಶಾಸ್ತ್ರ ತುರ್ತು ಔಷಧಿ ಎನ್ನುವ

ಕೋಲಾರಪತ್ರಿಕೆ



ಚಂದ್ರನ್ (ಎಂಬಿಬಿಎಸ್) ಬಂಗಾರದ ಪದಕ ಸ್ವೀಕರಿಸುತ್ತಿದ್ದಾರೆ ಎಂದು ವಿವರಿಸಿದರು.

ಬೆಂಗಳೂರಿನ ನಿಮ್ಹಾನ್ಸ್‌ನ ನಿರ್ದೇಶಕ ಡಾ॥ ಬಿ.ಎನ್. ಗಂಗಾಧರ್ ಘಟಿಕೋತ್ಸವ ಭಾಷಣ ಮಾಡುವರು. ಅರಸ್ ಉನ್ನತ ಶಿಕ್ಷಣ ಸಂಶೋಧನಾ ಸಂಸ್ಥೆಯ ಕುಲಾಧಿಪತಿ ಡಾ॥ ಎಸ್. ಕುಮಾರ್ ಅಧ್ಯಕ್ಷತೆ ವಹಿಸುವರು. ಅರಸು ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ರಾಜೇಶ್ ಎನ್. ಜಗದಾಳೆ ಉಪಸ್ಥಿತರಿರುವರೆಂದು ಹೇಳಿದರು.

ವಿವಿಧ ವಿಭಾಗಗಳಲ್ಲಿನ ಉತ್ತಮ ಅಂಕಗಳಿಕೆಗಾಗಿ ಸಂಸ್ಥೆಯ ಅಧ್ಯಕ್ಷ ಆರ್.ಎಲ್. ಜಾಲಪ್ಪನವರ ಹೆಸರಿನಲ್ಲಿ ಆರು ಮಂದಿಗೆ ಸ್ವರ್ಣ ಪದಕ ನೀಡುತ್ತಿರುವುದರ ಜೊತೆಗೆ ಕಾಲೇಜಿನಿಂದ ಹೊರಹೋಗುತ್ತಿರುವ ಅತ್ಯುತ್ತಮ ವಿದ್ಯಾರ್ಥಿ ಡಾ॥ ಮಹ್ನಾಜ್ ಸುಲ್ತಾನ ಅಜೀಂರಿಗೆ ಎರಡು, ಡಾ॥ ಅಭಿನಯ ರವಿಚಂದ್ರನ್‌ರಿಗೆ ನಾಲ್ಕು, ಮಲೇಷ್ಯಾದ ಡಾ॥ ತಾಂಗ್‌ಚುನ್ ಕಿಟ್‌ರಿಗೆ ಮೂರು, ಡಾ॥ ಲಾಲಿ ಸಿಯಾಂಗ್‌ರಿಗೆ ಎರಡು, ಡಾ॥ ಎಸ್. ವಿಷ್ಣು ಪ್ರೇಯಿ, ಡಾ॥ ಜಿನ್‌ಸ್ಕೈ ಚಾನ್, ಡಾ॥ ಎಂ.ಎಲ್. ಮೃದುಲಾರಿಗೆ ತಲಾ ಒಂದು, ಕ್ರೀಡಾ ಸಾಧನೆಗಾಗಿ ಡಾ॥ ಧ್ರುವಕುಮಾರ್ ರೆಡ್ಡಿ, ಡಾ॥ ಕೆ. ಶ್ರಾವ್ಯಾ ಮೋನಿಕಾ, ಸಾಂಸ್ಕೃತಿಕ ಚಟುವಟಿಕೆಗಾಗಿ ಆರಂಭಿಸುತ್ತಿದೆ. ೨ ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳು ಶುರುವಾಗಲಿವೆಯೆಂದು ತಿಳಿಸಿದರು.

ಗೋಷ್ಠಿಯಲ್ಲಿ ಉಪಸ್ಥಿತರಿದ್ದ ದುಬೈ ಮೂಲದ ಅಭಿನಯ ರವಿಚಂದ್ರನ್ (ಸುಮತಿ-ರವಿಚಂದ್ರನ್‌ರ ಪುತ್ರಿ) ಸಾಮಾನ್ಯ ಔಷಧಶಾಸ್ತ್ರ ಹೃದ್ರೋಗ ಶಾಸ್ತ್ರದಲ್ಲಿ ನಿಪುಣತೆಗಳಿಸುವ ಅಭಿಲಾಷೆ ವ್ಯಕ್ತಪಡಿಸಿ ಪಠ್ಯಕ್ಕೆ ಮಿಗಿಲಾದ ಅನುಭವ ಜ್ಞಾನ ಇಲ್ಲಿ ಲಭಿಸಿತೆಂದು ಹೇಳಿದರು.

ಕೋಲಾರದವರೇ ಆದ ಡಾ॥ ಡಿ.ಜಿ. ನಿಖಿಲಾ (ಪ್ರೇಮಕುಮಾರಿ-ಡಿ.ಎಸ್. ಗೋಪಾಲ್‌ರ ಪುತ್ರಿ) ಹೆತ್ತವರ ಆಶಯ ತಮ್ಮ ಈ ಸಾಧನೆಗೆ ಪ್ರೇರಣೆ ನೀಡಿದ್ದು ಕಠಿಣ ಪರಿಶ್ರಮ, ಪ್ರಾಕ್ಟಿಕಲ್ ಜ್ಞಾನ ವಿಸ್ತರಣೆಗೆ ಅವಕಾಶ ಡಾ॥ ದಿನೇಶ್‌ರ ಮಾರ್ಗದರ್ಶನ ಉತ್ತಮ ಅಂಕಗಳಿಕೆಗೆ ಕಾರಣವೆಂದರು.

ಅರಸು ವೈದ್ಯಕೀಯ ವಿ.ವಿ. ರಿಜಿಸ್ಟ್ರಾರ್ ಡಾ॥ ಕೆ.ಎನ್.ವಿ. ಪ್ರಸಾದ್, ಪ್ರಾಚಾರ್ಯ ಡಾ॥ ಪಿ.ಎಸ್. ಶ್ರೀರಾಮುಲು, ಉಪಪ್ರಾಚಾರ್ಯ ಡಾ॥ ಕೆ.ಎಸ್. ಶಶಿಧರ್, ಪ್ರೋಚಾನ್ಸಲರ್ ಡಾ॥ ಸಿ.ಕೆ. ರಂಜನ್, ಡೀನ್‌ಗಳಾದ ಡಾ॥ ಬೀನಾ, ಡಾ॥ ಮುನಿನಾರಾಯಣ, ಆರ್.ಎಲ್. ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ॥ ವಿ. ಲಕ್ಷ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.